International Journal of Kannada Research
www.kannadajournal.com

**ISSN: 2454–5813**
IJKR 2018; 4(4): 120-123
© 2018 IJKR
www.kannadajournal.com
Received: 21-08-2018
Accepted: 22-09-2018

**ಲಕ್ಷ್ಮೀಕಾಂತ ಚ. ಪಂಚಾಳ**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನೌಬಾದ, ಬೀದರ, ಮೊಬೈಲ್

**Correspondence**
**ಲಕ್ಷ್ಮೀಕಾಂತ ಚ. ಪಂಚಾಳ**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನೌಬಾದ, ಬೀದರ, ಮೊಬೈಲ್

# ಕನ್ನಡ ಗ್ರಂಥ ಸಂಪಾದನೆ ನಡೆದು ಬಂದ ದಾರಿ

**ಲಕ್ಷ್ಮೀಕಾಂತ ಚ. ಪಂಚಾಳ**

ಕನ್ನಡದಲ್ಲಿ 'ಗ್ರಂಥ ಸಂಪಾದನೆ' ಇತ್ತೀಚಗೆ ರೂಪ ತಳೆದ ವಿನೂತನ ಶಾಸ್ತ್ರ. ವಿದೇಶಿ–ದೇಶಿ ವಿದ್ವಾಂಸರಿಂದ ಸತತ ಪರಿಶ್ರಮದ ಫಲವಾಗಿ ಸ್ಪಷ್ಟವಾದ ನೆಲೆಯನ್ನು ಕಂಡಿರುವುದು ಕಾಣಬಹುದಾಗಿದೆ. ಪರಿಷ್ಕರಣೆ, ಮರುಪರಿಷ್ಕರಣೆಗೆ ಒಳಗಾಗುತ, ತನ್ನ ವ್ಯಾಪ್ತಿಯ ವಿಸ್ತಾರವನ್ನು ಪಡೆಯುತ ಸಾಗಿದೆ ಎಂಬುದು ಮನಗಾಣಬಹುದು. ಇಂಗ್ಲಿಷನ 'Textual Critism', 'Editing' ಗೆ ಸಂವಾದಿಯಾಗಿ ಕನ್ನಡದಲ್ಲಿ ಗ್ರಂಥಸಂಪಾದನೆಯನ್ನು ಬಳಸಲಾಗುತ್ತದೆ. ಇದನ್ನು 'ಗ್ರಂಥಪರಿಷ್ಕರಣೆ' ಎಂತಲೂ ಕರೆಯುತ್ತಾರೆ. ಗ್ರಂಥ ಸಂಪಾದನೆ ಕುರಿತು ವಿದ್ವಾಂಸರು ಅರ್ಥೈಸಿಹಿಸಿರುವರು.

1. "ಆಧುನಿಕ ಪೂರ್ವ ಕೃತಿಗಳನ್ನು ಬರೆದ ಲೇಖಕರ ಮೂಲ ಪಾಠವನ್ನು ಲಭ್ಯ ಸಾಮಗ್ರಿಯ ಸಾಯದಿಂದ ಪುನಾರಚಿಸಿ ಕೊಡುವದೇ ಗ್ರಂಥಸಂಪಾದನೆ"[1] ಎಂದು *ಡಾ. ಎಂ. ಚಿದಾನಂದಮೂರ್ತಿ*ಯವರು ವ್ಯಾಖ್ಯಾನಿಸಿದ್ದಾರೆ.
2. "…..ಪ್ರಾಚೀನ ಕೃತಿಗಳು ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ, ಜನತೆಯ ಉದ್ದೇಶಿತ ಮತ್ತು ಅನುದ್ದೇಶಿತ ವ್ಯಾತ್ಯಾಸಗಳಿಗೆ ಗುರಿಯಾಗಿ ವಿರೂಪಗೊಳ್ಳುವುದು ಸಹಜ. ವ್ಯವಸ್ಥಿತ ವಿಧಾನಗಳನ್ನವಲಂಬಿಸಿ, ಈ ವಿರೂಪವನ್ನು ಒರೆಸಿ ಹಾಕಿ, ಅವುಗಳನ್ನು ಮತ್ತೆ ಮೂಲ ರೂಪಕ್ಕೆ ತಿರುಗಿಸಬೇಕು, ಶುದ್ಧಿಗೊಳಿಸಬೇಕು. ಈ ಶುದ್ಧಿಕರಣ ಕ್ರಿಯೆ ಗ್ರಂಥಸಂಪಾದನೆ"[2] ಎಂದು *ಡಾ. ಎಂ.ಎಂ ಕಲಬುರ್ಗಿ*ಯವರು ಅರ್ಥೈಹಿಸಿದ್ದಾರೆ.
3. "ಯಾವುದೇ ಒಂದು ಗ್ರಂಥವನ್ನು ಲೇಖಕನು ರಚಿಸಿದಂತೆ ಸಂಯೋಜಿಸಿ ಕೊಡುವ ಕಾರ್ಯ; ಅಥವಾ ಅದಕ್ಕೆ ಹತ್ತಿರವಾಗುವಂತೆ ಮಾಡುವ ಸುವ್ಯವಸ್ಥಿತ ಕ್ರಿಯೆ ಗ್ರಂಥಸಂಪಾದನೆ"[3] ಎಂದು *ಸೀತಾರಾಮ ಜಾಗೀರ್‌ದಾರ್* ಹೇಳಿದ್ದಾರೆ.
4. "ಯಾವುದೇ ಒಂದು ಕೃತಿಯ ಲಭ್ಯ ಹಸ್ತಪ್ರತಿ ಅಥವಾ ಹಸ್ತಪ್ರತಿಗಳ ಸಹಾಯದಿಂದ ತುಲನಾತ್ಮಕವಾಗಿ ಅಭ್ಯಾಸ ಮಾಡಿ, ಕೃತಿಯ ಮೂಲಸ್ವರೂಪವನ್ನು ನಿರ್ಣಯಿಸಿ, ಕರ್ತೃ ಕೃತಿಗಳ ಬಗೆಗೆ ವಿಚಾರ ವಿಮರ್ಶೆ ಮಾಡಿ, ಟೀಕೆ, ಟಿಪ್ಪಣಿಗಳನ್ನು ನೀಡುವುದೇ ಗ್ರಂಥಸಂಪಾದನೆ"[4] ಎಂದು *ಬಿ,ಎಸ್.ಸಣ್ಣಯ್ಯ*ನವರು ಹೇಳಿದ್ದಾರೆ.
5. "ಯಾವುದೇ ಒಂದು ಕೃತಿಯ ಆಶಯ ಮತ್ತು ಪಾಠಾಂತರಗಳನ್ನು ಅವಲಂಬಿಸಿ ಮೂಲಪಠ್ಯವನ್ನು ನಿರ್ಣಯಿಸುವುದನ್ನು ಗ್ರಂಥಸಂಪಾದನೆ"[5] ಎಂದು *ಡಾ. ಎಫ್.ಟಿ. ಹಳ್ಳಿಕೇರಿ*ಯವರು ಅರ್ಥೈಯಿಸಿದ್ದಾರೆ.

ಒಟ್ಟಾರೆಯಾಗಿ ಗ್ರಂಥಸಂಪಾದನೆ ಎಂದರೆ, ಪ್ರಾಚೀನ ಕೃತಿಗಳ ಕುರಿತು ಸಿಗುವ ಹಸ್ತಪ್ರತಿಗಳ ಆಧಾರದ ಮೇಲೆ ಪರಿಣತ ವಿದ್ವಾಂಸನೊರ್ವನು ಉದ್ದೇಶಿತ ಮತ್ತು ಅನುದ್ದೇಶಿತ ವ್ಯಾತ್ಯಾಸಗಳನ್ನು ಸರಿಪಡಿಸಿ, ಮೂಲ ಪಠ್ಯದಂತೆ ತಿರ್ಮಾನಿಸುವ ಕ್ರಿಯೆಯಾಗಿದೆ ಎಂದು ಹೇಳಬಹುದು.

ಹಸ್ತಪ್ರತಿಗಳು ಗ್ರಂಥಸಂಪಾದನೆಯ ಆಧಾರಸ್ತಂಬಗಳಾಗಿವೆ. ವಿದ್ವಾಂಸರು ಗ್ರಂಥಸಂಪಾದನೆಯಲ್ಲಿ ಸಾಮಾಗ್ರಿಸಂಕಲನ, ವಂಶಾವಳಿ ನಿರ್ಣಯ, ಪಾಠಸಂಕಲನ, ಪಾಠ ಪರಿಷ್ಕರಣ ಮತ್ತು ಉನ್ನತ ವಿಮರ್ಶೆ ಎಂಬ ಐದು ಹಂತಗಳನ್ನು ಅನುಸರಿಸುತ್ತಾರೆ.

"ಹಸ್ತಪ್ರತಿಶಾಸ್ತ್ರದ ಒಂದು ಭಾಗವಾಗಿರುವ ಗ್ರಂಥ ಸಂಪಾದನಶಾಸ್ತ್ರ ತನ್ನ ತೆಕ್ಕೆಗೆ ಕಾಲದಿಂದ ಕಾಲಕ್ಕೆ ಹೊಸ ಹೊಸ ತಿಳಿವಳಿಕೆಗಳನ್ನು ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ಮೋಗ್ಲಿಂಗ್, ರೈಸ್, ಕಿಟೆಲ್‌ರಂತಹ ಪಂಡಿತರು ಆರೂಢಿದ ಈ ವಿದ್ವಾತ್ ಕ್ಷೇತ್ರದಲ್ಲಿ ಮುಂದಿನ ಪಂಡಿತರಿಂದ ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬರಲಾಗಿದೆ"[6] ಎಂಬ ಡಾ. ಎಸ್. ಎಸ್.

ಅಂಗಡಿಯವರ ಮಾತು ಕನ್ನಡ ಗ್ರಂಥಸಂಪಾದನೆ ಬೆಳವಣಿಗೆಯ ತೋರನೋಟದಂತವೆ.

ಕನ್ನಡ ಗ್ರಂಥ ಸಂಪಾದನೆಯ ಇತಿಹಾಸವನ್ನು ನಾವು ನಾಲ್ಕು ಘಟ್ಟಗಳಲ್ಲಿ ಬೆಳೆದು ಬಂದಿರುವುದು ಗುರುತಿಸಬುದುದಾಗಿದೆ. ಈ ಕ್ಷೇತ್ರದಲ್ಲಿ ನೂರಾರು ವಿದ್ವಾಂಸರು ದುಡಿದಿದ್ದಾರೆ. ಇವರ ಫಲವಾಗಿ ಕನ್ನಡ ಗ್ರಂಥಸಂಪಾದನೆಯು ಕಾಲಕ್ಕೆ ಅನುಗುಣವಾಗಿ ಹೊಸ–ಹೊಸತನ್ನು ಪಡೆದುಕೊಳದಳ್ಳುತ್ತ ಸಾಗಿದೆ. ಇದರ ವ್ಯಾಪ್ತಿ ಗುರುತಿಸುವ ನೋಟ ಇಲ್ಲಿದೆ.

**ಮೊದಲನೆಯ ಘಟ್ಟ :** ವಿದೇಶಿ ವಿದ್ವಾಂಸರಾದ ಮೆಕೆಂಝಿ, ಹರ್ಮನ್ ಮೋಗ್ಲಿಂಗ್, ಜೆ.ಗ್ಯಾರೆಟ್, ಕಿಟೆಲ್, ರೈಸ್ ಮೊದಲಾದವರು.

**ಎರಡನೆಯ ಘಟ್ಟ :** ದೇಶಿ ವಿದ್ವಾಂಸರಾದ ಎಸ್.ಜಿ.ನರಸಿಂಹಚಾರ್, ಎಂ.ಎ. ರಾಮಾನುಜಯ್ಯಂಗಾರ್, ಆರ್.ನರಸಿಂಹಚಾರ್, ಉತ್ತಂಗಿ ಚೆನ್ನಪ್ಪ, ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ ಮೊದಲಾದರು.

**ಮೂರನೆಯ ಘಟ್ಟ:** ಟಿ.ಎಸ್.ವೆಂಕಣ್ಣಯ್ಯ, ಡಿ.ಎಲ್.ನರಸಿಂಹಚಾರ್, ತೀ.ನಂ.ಶ್ರೀ, ಆರ್.ಸಿ. ಹಿರೇಮಠ ಮೊದಲಾದರು.

**ನಾಲ್ಕನೆಯ ಘಟ್ಟ:** ಎಂ.ಎಂ.ಕಲಬುರ್ಗಿ, ಬಿ.ಎಸ್.ಸಣ್ಣಯ್ಯ, ಜಿ.ಜಿ.ಮಂಜುನಾಥನ್, ವೈ.ಸಿ. ಭಾನುಮತಿ, ಕೆ.ರವೀಂದ್ರನಾಥ, ಎಫ್.ಟಿ.ಹಳ್ಳಿಕೇರಿ, ಎಸ್.ಎಸ್.ಅಂಗಡಿ, ವೀರೇಶ ಬಡಿಗೇರ ಮೊದಲಾದವರು.

ಪಾಶ್ಚಾತ್ಯ ದೇಶಗಳಲ್ಲಿ ಹುಟ್ಟಿ ಬಂದ ಈ ಶಾಸ್ತ್ರ ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದ ಮೂಲಕ ಕರ್ನಾಟಕವನ್ನು ಪ್ರವೇಶಿಸಿತು. ಅಂದರೆ ಭಾರತೀಯರಿಗೆ ಈ ಶಾಸ್ತ್ರದ ಕುರಿತು ಪ್ರಜ್ಞೆ ಇರಲಿಲ್ಲ ಎಂದರ್ಥವಲ್ಲ. ಗ್ರಂಥ ಸಂಪಾದನೆ ಕುರಿತು ಸಿದ್ಧಾಂತ ರೂಪದ ಜ್ಞಾನ ಹೊರತು ಪಡಿಸಿದರು, ಗ್ರಂಥ ರಕ್ಷಣೆ, ಗ್ರಂಥಲೇಖನ, ಪಾಠಕಕ್ಷಣೆ, ಪಾಠಸಂಗ್ರಹ ಹಾಗೂ ಪಾಠ ನಿರ್ಣಯಗಳ ಬಗ್ಗೆ ತಿಳುವಳಿಕೆ ಇತ್ತೆಂಬುದು ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಶಾಸನಗಳ ಉಲ್ಲೇಖಗಳಿಂದ ಕಂಡುಕೊಳ್ಳಬಹುದಾಗಿದೆ. ಕನ್ನಡದ ರತ್ನಾತ್ರಯರಲ್ಲಿ ಒಬ್ಬನಾದ ಕವಿ ಪೊನ್ನನ 'ಶಾಂತಿಪುರಾಣ'ದ ಸಾವಿರ ಪ್ರತಿಗಳನ್ನು ಮಾಡಿಸಿ ದಾನಚಿಂತಾಮಣಿ ಬಿರುದಾಂಕಿತ 'ಅತ್ತಿಮಬ್ಬೆ'ಯು ದಾನ ಮಾಡಿವ ಸಂಗತಿಯ ಗ್ರಂಥಲೇಖನಕ್ಕೆ ನಿದರ್ಶನವಾಗಿದೆ. ಕ್ರಿ.ಶ. 1058ರ ಕಲ್ಯಾನ ಚಾಲುಕ್ಯರ ಕಾಲದ ನಾಗಾವಿಶಾಸನವು ಶಾಲೆಯ ಸರಸ್ವತಿ ಭಂಡಾರಿಗೆ ದತ್ತಿಕೊಟ್ಟ ವಿಚಾರವನ್ನು 'ಸರಸ್ವತಿ ಭಂಡಾರಿಗೆ ಮತ್ತು 20' ಎಂದು ದಾಖಲಿಸಿರುವುದು ಗ್ರಂಥ ರಕ್ಷಣೆಗೆ ನಿದರ್ಶನವಾಗಿದೆ. ಅಲ್ಲದೆ 'ಪೆರ್ದೂರಿನ ಶಾಸನ'ವು ಶೃಂಗೇರಿಯ ಪುಸ್ತಕ ಭಂಡಾರದ ಸಂರಕ್ಷಣೆಗೆ ಕವಿ ಕೃಷ್ಣಭಟ್ಟನಿಗೆ 'ಬೆಳಂಬಿ' ಗ್ರಾಮದ ಆದಾಯ ದತ್ತಿಯಾಗಿ ಬಿಟ್ಟ ವಿಚಾರವು ದಾಖಲಿಸುತ್ತದೆ. ಈ ರೀತಿಯ ಹಲವು ನಿದರ್ಶನಗಳು ಗುರುತಿಸಲು ಸಾಧ್ಯವಿದೆ.

ಕನ್ನಡದಲ್ಲಿ ಮೊದಲಿಗೆ ಹಸ್ತಪ್ರತಿಗಳನ್ನು ಸಡಂಗ್ರಹಿಸಿದ ಕೀರ್ತಿ 'ಕರ್ನಲ್ ಮೆಕೆಂಝಿ'ಗೆ ಸಲ್ಲುತ್ತದೆ. ಇವರು ಕನ್ನಡದ ಹಸ್ತಪ್ರತಿಗಳ ಸರ್ವೇಕ್ಷಣೆ ಹಾಗೂ ಸಂಗ್ರಹಕ್ಕಾಗಿ ಮೊಟ್ಟಮೊದಲು ಕ್ಷೇತ್ರಕಾರ್ಯವನ್ನು ಕೈಗೊಂಡರು. ಹತ್ತೊಂಬತ್ತನೆಯ ಶತಮಾನದಲ್ಲಿ ಕನ್ನಡದಲ್ಲಿ ಮುದ್ರಣ ಕಾರ್ಯ ಪ್ರಾರಂಭವಾಯಿತು.ಶ 'ವಿಲಿಯಂ ಕ್ಯಾರಿ' ಯ A Grammar of the karnata language (1817) ಎಂಬ ಗ್ರಂಥ ಕನ್ನಡದ ಮೊದಲ ಮುದ್ರಿತ ಕೃತಿ ಎಂದು ವಿದ್ವಾಂಸರು ಗುರುತಿಸುತ್ತಾರೆ. ನಂತರ ಜಾನ್ ಮೆಕರಲ್ ನ ೦ Grammar of Canarase Language (1820), ವಿ. ರೀವ್ಸ್‌ನ Enagish kannada DictiMnary (1824), ಶ್ರೀರಂಗಪಟ್ಟಣದ ಕೃಷ್ಣಮಾಚಾರಿಯವರು ಬರೆದ ಹೊಸಗನ್ನಡ ನುಡಿಗನ್ನಡಿ (1838), 1834 ರಲ್ಲಿ ಸ್ಥಾಪಿತವಾದ ಮಂಗಳೂರಿನ 'ಬಾಸೆಲ್ ಮಿಶನ್, ನ ಮೂಲಕ ಮೋಗ್ಲಿಂಗ್‌ರು 'ಬೊಬ್ಲಿಯಾಥೆಕಾ ಮಾಲೆ'ಯಲ್ಲಿ ಲಕ್ಷ್ಮೀಶನ ಜೈಮಿನಿ ಭಾರತ '(1848), ಭೀಮಕವಿಯ ಬಸವಪುರಾಣ (1850), ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ (1851), ಕನ್ನಡದ ಗಾದೆಗಳು (1859), ದಾಸರಪದಗಳು (1860) ಮುಂತಾದ ಕೃತಿಗಳು ಕಲ್ಲಚ್ಚಿನ ಮೂಲಕ ಪ್ರಕಟಗೊಂಡವು. ಜೊತೆಗೆ ಬೆಂಗಳೂರು, ಬಳ್ಳಾರಿ ಭಗದಲ್ಲಿ ಸೆಟ್ಟರ ಮೂಲಕ ಅನೇಕ ಕೃತಿಗಳು ಗ್ರಂಥ ಸಂಪಾದನೆಯ ರೂಪದಲ್ಲಿ ಪ್ರಾರಂಭದಲ್ಲಿ ಬಂದವು.

ಶಾಸ್ತ್ರೀಯ ಹಿನ್ನಲೆಯಲ್ಲಿ ಕಿಟೆಲ್‌ರವರು 'ಶಬ್ದಮಣಿದರ್ಪಣ' (1872) ವನ್ನು 9 ಹಸ್ತ ಪ್ರತಿಗಳ ಸಹಾಯದಿಂದ ಸಂಪಾದಿಸಿದರು. ಇವರನ್ನು ಕನ್ನಡ ಗ್ರಂಥಗಳ ಶಾಸ್ತ್ರೀಯ ಪರಿಷ್ಕರಣದ ಪ್ರಥಮ ವ್ಯಕ್ತಿಯೆಂದು ಮತ್ತು ಶಬ್ದಮಣಿದರ್ಪಣವನ್ನು ಕನ್ನಡ ಸಾಹಿತ್ಯ ಕ್ಷೇತ್ರದ ಮೊದಲ ಶಾಸ್ತ್ರೀಯ ಸಂಪಾದಿತ ಕೃತಿ ಎಂದು ಕರೆಯಲ್ಪಡುತ್ತದೆ. ಈ ಕೃತಿಯ ನಂತರ 1875ರಲ್ಲಿ ನಾಗವರ್ಮನ 'ಛಂದೋಬುಧಿ' ಯನ್ನು 11 ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದರು. ಇದಕ್ಕೆ ಸುಧೀರ್ಘವಾದ 50 ಪುಟಗಳ ಕನ್ನಡ ಸಾಹಿತ್ಯ ಚರಿತ್ರೆ ಕುರಿತು ಪೀಠಿಕೆಯನ್ನು ಇಂಗ್ಲಿಷನಲ್ಲಿ ಬರೆದಿದ್ದಾರೆ.

ಜೆ. ಗ್ಯಾರೆಟ್ ರವರು ವೆಸ್ಲಿಯನ್ ಮಿಶನ್‌ಕ್ಕೆ ಸಂಬಂಧಿಸಿದವರು. ಇವರು ಮೈಸೂರು ಪ್ರದೇಶದಲ್ಲಿ ಮುದ್ರಣ ಮತ್ತು ಪ್ರಕಟಣೆ ಕಾರ್ಯಕೈಗೊಂಡವರಲ್ಲಿ ಮೊದಲಿಗರು. ಇವರು ಪಂಚತಂತ್ರ ಕೃತಿಯನ್ನು 1865 ರಲ್ಲಿ ಮತ್ತು 1868 ರಲ್ಲಿ ಶಬ್ದಮಣಿದರ್ಪಣವನ್ನು ಸಂಪಾದಿಸಿದರು. ಬಿ. ಎಲ್. ರೈಸ್ ರವರು 'ಬಿಬ್ಲಿಯಥಿಕಾ ಕರ್ನಾಟಿಕಾ' ಮಾಲೆಯ ಮೂಲಕ 1873 ರಲ್ಲಿ ಅಮರಕೊಶ, 1882 ರಲ್ಲಿ 3 ಹಸ್ತಪ್ರತಿಗಳ ಸಹಾಯದಿಂದ ರಾಮಚಂದ್ರ ಪುರಾಣವನ್ನು, 1884 ರಲ್ಲಿ ಕರ್ನಾಟಕ ಭಾಷಾಭೂಷಣವನ್ನು 1890 ರಲ್ಲಿ ಶಬ್ದಾನುಶಾಸನವನ್ನು, 1898 ರಲ್ಲಿ 2 ಹಸ್ತಪ್ರತಿಗಳ ಸಹಾಯದಿಂದ ಪಂಪಭಾರತ ಕೃತಿಯನ್ನು ಸಂಪಾದಿಸಿ ಕೊಟ್ಟರು. ಜೊತೆಗೆ 'Epigraphia Carnatica' ಹೆಸರಿನ 12 ಸಂಪುಟಗಳ ಶಾಸನ ಸಂಪಾದನೆಯನ್ನು ಕೈಗೊಂಡ, ಇವರು ಕನ್ನಡ ಶಾಸನಗಳ ಕ್ಷೇತ್ರದಲ್ಲಿ ಭದ್ರಬುನಾದಿ ಹಾಕಿದರು. ಆದ್ದರಿಂದ ಇವರನ್ನು 'ಕನ್ನಡ ಶಾಸನಗಳ ಪಿತಾಮಹ' ಎಂದು ಕರೆಯುವರು.

ಕೆ. ಬಿ. ಪಾಠಕರವರು ಕನ್ನಡದ ಮೊದಲ ಉಪಲಬ್ದ ಕೃತಿಯಾದ ಕವಿರಾಜಮಾರ್ಗವನ್ನು 1898 ವ್ಯವಸ್ಥಿತವಾಗಿ ಸಂಪಾದಿಸಿದರು.

ಎಮ್. ಎ. ರಾಮಾನುಜಯ್ಯಂಗಾರ್ ಮತ್ತು ಎಸ್. ಜಿ. ನರಸಿಂಹಾಚಾರವರು 1892 ರಲ್ಲಿ 'ಕರ್ನಾಟಕ ಕಾವ್ಯ ಮಂಜರಿ' ಮಾಸ ಪತ್ರಿಕೆ ಆರಂಭಿಸಿದರು. ಇದರಡಿಯಲ್ಲಿ ಅನೇಕ ಕೃತಿಗಳು ಬೆಳಕು ಕಂಡಿರುವುದು ಕಾಣಬಹುದಾಗಿದೆ. ಅವುಗಳಲ್ಲಿ ಹರಿಹರನ 'ಪಂಪಾಶತಕ', ಗುಬ್ಬಿ ಮಲ್ಲಣಾರ್ಯನ 'ಭಾವಚಿಂತಾರತ್ನ', ಅಗ್ಗಳನ 'ಚಂದ್ರಪ್ರಭಾಪುರಾಣ' ಮುದ್ದಣನ 'ರಾಮಾಶ್ವಮೇಧ', ಶ್ರೀರಾಮ 'ಪಟ್ಟಾಭಿಷೇಕಂ', ಸಂಚಿಹೊನ್ನಮ್ಮಳ 'ಹದಿಬದೆಯಧರ್ಮ', ಕನಕದಾಸರ 'ಮೋಹನ ತರಂಗಿಣಿ', ದುರ್ಗಸಿಂಹನ 'ಪಂಚತಂತ್ರ', ಪಂಪನ 'ಆದಿಪುರಾಣ' ಮುಂತಾದ ಕೃತಿಗಳನ್ನು ಸಂಪಾದಿಸಿ ಒಂದು ಸಂಸ್ಥೆ ಮಾಡುವ ಕಾರ್ಯವನ್ನು ಎರಡು ಜನ ವಿದ್ವಾಂಸರು ಮಾಡಿದರು.

ಟಿ. ಎಸ್. ವೆಂಕಣ್ಣಯ್ಯನವರು ಹರಿಹರನ 'ಬಸವದೇವರರಗಳೆ' ಯನ್ನು 1930 ರಲ್ಲಿ, 'ಸಿದ್ಧರಾಮ ಚಾರಿತ್ರ'ವನ್ನು ಸಂಪಾದಿಸಿದರು. ಎ. ಆರ್. ಕೃಷ್ಣಶಾಸ್ತ್ರೀಯವರು 'ಕವಿಜಹ್ವಾಬಂಧನ' ವನ್ನು

ಸಂಪಾದಿಸಿದರು. ಕನ್ನಡದ ಅಶ್ವಿನಿ ದೇವತೆಗಳೆಂದು ಹೆಸರಾದ ಈ ಇಬ್ಬರೂ ಸೇರಿ ರಾಘವಾಂಕ ಕವಿ ವಿರಚಿತ 'ಹರಿಶ್ಚಂದ್ರ ಕಾವ್ಯ'ವನ್ನು 1931 ರಲ್ಲಿ ಸಂಪಾದಿಸಿ ಪ್ರಕಟಿಸಿದರು.

ಗ್ರಂಥ ಸಂಪಾದನೆ ಬಹುಕಾಲ ನಿಲ್ಲಬಲ್ಲ ಸಂಪಾದನ ಕೃತಿ ನೀಡಿದವರು ತೀ .ನಂ .ಶ್ರೀ ಮತ್ತು ಡಿ. ಎಲ್. ನರಸಿಂಹಚಾರ್ಯ ರವರು. ತೀ .ನಂ .ಶ್ರೀ ಯವರು 'ನಂಬಿಯಣ್ಣನ ರಗಳೆ' 1941ರಲ್ಲಿ ಮತ್ತು 'ಗದಾಯುದ್ಧ ಸಂಗ್ರಹ' 1951 ರಲ್ಲಿ ಸಂಪಾದಿಸಿದರು. ಡಿ. ಎಲ್. ನರಸಿಂಹಚಾರ್ಯ ಇವರು 'ಸಿದ್ಧರಾಮ ಚಾರಿತ್ರ ಸಂಗ್ರಹ (1951), 'ವಡ್ಡಾರಾಧನೆ' (1949), ಪಂಪರಾಮಾಯಣ, ಶಬ್ದಮಣಿದರ್ಪಣ (1959)ಗಳನ್ನು ಸಂಪಾದಿಸಿದರು.

ಗ್ರಂಥಸಂಪಾದನೆಯಲ್ಲಿ ಎದ್ದು ಕಾಣುವ ಮತ್ತೊಂದು ಹೆಸರು ಎಲ್. ಬಸವರಾಜುರವರು. ಬಸವಣ್ಣನವರ ವಚನಗಳು, ಅಲ್ಲಮ್ಮನ ವಚನಗಳು, ಅಕ್ಕನ ವಚನಗಳು ಮೊದಲಾದ ಕೃತಿಗಳನ್ನು ಸಂಪಾದಿಸಿಕೊಟ್ಟರು. ಇನ್ನೂ ವಚನಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಹುದೊಡ್ಡ ಹೆಸರು ಫ.ಗು. ಹಳಕಟ್ಟಿಯವರದ್ದು. ಇವರು 'ವಚನ ಸಾಹಿತ್ಯದ ಪಿತಾಮಹ'ರೆಂದು ಖ್ಯಾತರು. 1926 ರಲ್ಲಿ 'ಶ್ರೀ ಬಸವೇಶ್ವರ ವಚನಗಳು' ಗ್ರಂಥ ಮೂಲಕ ಸಂಪಾದನೆ ಆರಂಭಿಸಿ 20 ಕ್ಕೂ ಹೆಚ್ಚು ವಚನ ಸಂಪುಟಗಳು, ರಗಳೆಯ 7 ಸಂಪುಟಗಳು, ವೀರಶೈವರಗಳೆಗಳು ಮೊದಲಾದವುಗಳಲ್ಲದೇ 'ಶಿವಾನುಭವ ಗ್ರಂಥಮಾಲೆ'ಯನ್ನು ಆರಂಭಿಸಿ ನೂರಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದರು.

ಉತ್ತರಕರ್ನಾಟಕದಲ್ಲಿ ಶಾಸ್ತ್ರೀಯ ಸಂಪಾದನೆಯನ್ನು ಪ್ರಯೋಗಿಸಿ ತೋರಿಸಿದ ಪ್ರಥಮ ವ್ಯಕ್ತಿಯೆನಿಸಿದ, ಎಸ್. ಎಸ್. ಬಸವನಾಳರವರು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಮೂಲಕ ಚನ್ನಬಸವ ಪುರಾಣವನ್ನು 1984 ರಲ್ಲಿ, ಪ್ರಭುಲಿಂಗಲೀಲೆಯನ್ನು 1938 ರಲ್ಲಿ, ಶಬರಶಂಕರ ವಿಳಾಸ 1929 ರಲ್ಲಿ, ಪಾಪಶತಕ – ರಕ್ಷಾಶತಕ 1940 ರಲ್ಲಿ, ಬಸವಣ್ಣನವರ ವಚನವನ್ನು, ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ಕಾವ್ಯಾವಲೋಕನಂ 1939ರಲ್ಲಿ, ಶಬ್ದಾನುಶಾಸನ 1941 ರಲ್ಲಿ ಮತ್ತು ಮುರುಘಾ ಮಠದ ಮೂಲಕ ಕೈವಲ್ಯಕಲ್ಪವಲ್ಲರಿ 1945ರಲ್ಲಿ, ಕೈವಲ್ಯ ದರ್ಪಣ 1943ರಲ್ಲಿ ಕೃತಿಗಳನ್ನು ಸಂಪಾದಿಸಿದರು.

ಧಾರವಾಡ ಭಾಗದಲ್ಲಿ ಆರ್. ಸಿ. ಹಿರೇಮಠರು 'ಕನ್ನಡ ಕಾವ್ಯ ಮಾಲೆ' ಎಂಬ ಹೆಸರಿನಲ್ಲಿ ರಾಜಶೇಖರ ವಿಲಾಸ ಸಂಗ್ರಹ, ಸೋಮನಾಥ ಚಾರಿತ್ರ, ರಾಜಶೇಖರ ವಿಲಾಸಂ, ಭೈರಮೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಬಸವರಾಜ ವಿಜಯಂ ಮೊದಲಾದ ಕೃತಿಗಳನ್ನು ಸಂಪಾದಿಸಿದರು. ಇವರ ಜೊತೆಗೆ ಪರಿಷ್ಕರಣ ಕಾರ್ಯದಲ್ಲಿ ಡಾ. ಎಮ್. ಎಸ್. ಸುಂಕಾಪುರವರು ಸಹಸಂಪಾದಕರಾಗಿ ಕಾರ್ಯಕೈಗೊಂಡರು.

ಕಿಟೆಲ್‌ರಂತೆ ಮದ್ರಾಸ ಪ್ರಾಂತದಲ್ಲಿ ಮದ್ರಾಸ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಇತರ ವಿದ್ವಾಂಸರ ಸಹಾಯದಿಂದಲೂ ಕನ್ನಡ ಗ್ರಂಥಗಳನ್ನು ಪರಿಷ್ಕರಿಸಿ ಪ್ರಕಟಿಸಿದ ಪ್ರಮುಖ ವಿದ್ವಾಂಸರೆಂದರೆ ಬಿ. ರಾಮರಾವ್, ಎ. ವೆಂಕಟರಾವ್, ಪಂಜೆ ಮಂಗೇಶರಾವ್, ಯು. ಮಂಗೇಶರಾವ್, ಮುಳಿಯ ತಿಮ್ಮಪ್ಪಯ್ಯ, ಎಂ. ಮರಿಯಪ್ಪಭಟ್ಟ ಮೊದಲಾದವರು. ಇವರಲ್ಲಿ ಎಂ.ಮರಿಯಪ್ಪಭಟ್ಟರ ಕಾರ್ಯ ಪ್ರಶಂಸನಿಯವಾಗಿದೆ.

ಕನ್ನಡ ಗ್ರಂಥ ಸಂಪಾದನೆಯಲ್ಲಿ ಬಿ. ಮಲ್ಲಪ್ಪ, ಸೋಸಲೆ ಅಯ್ಯಶಾಸ್ತ್ರೀ, ಪಿ. ಆರ್. ಕರಿಬಸವ ಶಾಸ್ತ್ರೀ, ಎಚ್. ದೇವಿರಪ್ಪ, ಎನ್. ಅನಂತರಂಗಾಚಾರ್, ಕೆ. ವೆಂಕರಾಮಪ್ಪ, ಎನ್. ಬಸವರಾಧ್ಯ, ಬಿ. ವ್ಹಿ. ರಾಜೂರ, ಬಿ. ವ್ಹಿ. ಶಿರೂರ, ಎಸ್. ಶಿವಣ್ಣ, ವಿದ್ಯಾಶಂಕರ, ಪಿ. ಎಂ. ಗಿರಿರಾಜು, ಜಿ.ಟಿ. ಮಂಜುನಾಥ, ವೈ.ಸಿ. ಭಾನುಮತಿ ಮೊದಲಾದ ಅನೇಕ ವಿದ್ವಾಂಸರು. ಅಲ್ಲದೆ ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ವಿಭಾಗದ ಕೆ.ರವೀಂದ್ರನಾಥ, ವಿರೇಶ ಬಡಿಗೇರ, ಎಫ್. ಟಿ. ಹಳ್ಳಿಕೇರಿ ಹೆಸರಿಸಬಹುದು.

ಗ್ರಂಥ ಸಂಪಾದಿಸುವ ಕೆಲಸ ಶಾಸ್ತ್ರೀಯವಾಗಿ ನಡೆದರು ಅದನ್ನೇ ಒಂದು ಶಾಸ್ತ್ರವಾಗಿ ಕನ್ನಡದಲ್ಲಿ ಮೊದಲ ಬಾರಿ ಶಾಸ್ತ್ರ ಗ್ರಂಥವನ್ನು ಕೊಟ್ಟವರು ಡಿ. ಎಲ್. ನರಸಿಂಹಚಾರ್ಯರವರು. ಇವರು 1964 ರಲ್ಲಿ ಪ್ರಕಟಿಸಿದ 'ಕನ್ನಡ ಗ್ರಂಥ ಸಂಪಾದನೆ' ಕೃತಿಯು ಗ್ರಂಥಸಂಪಾದನಾಶಾಸ್ತ್ರದ ಚರಿತ್ರೆ, ಲೇಖನ ಸಾಮಗ್ರಿ, ಲಿಪಿಕಾರರು, ಹಸ್ತಪ್ರತಿಸ್ವರೂಪ ಮತ್ತು ವಿಂಗಡಣೆ, ಪಾಠಂತರ ಸಂಕಲನ, ಅಕ್ಷರ ಸ್ಖಾಲಿತ್ಯ ಪಾಠಪರಿಷ್ಕರಣೆ ಮೊದಲಾದ ವಿಚಾರಗಳನ್ನು ಒಳಗೊಂಡ ಮೇರು ಗ್ರಂಥ.

ಇದೇ ನಿಟ್ಟಿನಲ್ಲಿ 1968 ರಲ್ಲಿ ಎನ್. ಎಸ್. ಲಕ್ಷ್ಮಿ ನಾರಾಯಣ ಭಟ್ಟರಿಂದ ಡಾ. ಎಸ್. ಎಮ್. ಕತ್ರೆ ಅವರ 'Introduction to Indian Textual Criticism' ಎಂಬ ಗ್ರಂಥವನ್ನು 'ಭಾರತೀಯ ಗ್ರಂಥ ಸಂಪಾದನಾ ಪರಿಚಯ' ಎಂಬ ಹೆಸರಿನಿಂದ ಅನುವಾದಿಸಿದರು. ಇದು ಸಂಸ್ಕೃತ ಹಸ್ತ ಪ್ರತಿಗಳ ಪರಿಚಯ, ಸ್ಖಾಲಿತ್ಯ ವಿವರ ಮುಂತಾದ ಸಂಸ್ಕೃತ ಸಾಹಿತ್ಯಕ್ಕೆ ಸಂಬಂಧಿಸಿರುವ ವಿವರಗಳನ್ನೊಳಗೊಂಡ ಇನ್ನೊಂದು ಶ್ರೇಷ್ಠ ಕೃತಿ.

ಕನ್ನಡ ಗ್ರಂಥ ಸಂಪಾದನೆ ಶಾಸ್ತ್ರದ ಮತ್ತೊಂದು ಮೇರು ಕೃತಿ ಎಂ. ಎಂ. ಕಲಬುರ್ಗಿಯವರ 'ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರ' ಆರು ಕಾಂಡಗಳನ್ನು ಹೊಂದಿದೆ. ಪ್ರತಿಕಾಂಡದಲ್ಲಿ ಎರಡೆರಡು ಪರಿಚ್ಛೇದಗಳನ್ನು ಒಳಗೊಂಡಿದೆ. ಅಲ್ಲದೇ 1978 ರಲ್ಲಿ ಪ್ರಕಟವಾದ ಸೀತಾರಾಮ ಜಾಗೀರದಾರ್‌ರ 'ಗ್ರಂಥ ಸಂಪಾದನಾ ಶಾಸ್ತ್ರ ಪರಿಚಯ' ಮತ್ತು ಇತ್ತೀಚಿಗೆ 2012 ರಲ್ಲಿ ಪ್ರಕಟವಾದ ಡಾ. ಎಸ್. ಎಸ್. ಅಂಗಡಿಯವರ ಸಂಪ್ರಬಂಧಗಳ ಸಂಪುಟ ' ಕರ್ನಾಟಕ ಗ್ರಂಥ ಸಂಪಾದನೆ' ಮತ್ತು ವಿವಿಧ ವಿದ್ವಾಂಸರ ಸಾಂದರ್ಭಿಕ ಲೇಖನಗಳ ಮೂಲಕ ಗ್ರಂಥಸಂಪಾದನ ಶಾಸ್ತ್ರವು ಬೆಳೆದು ನಿಂತಿದೆ.

ಒಟ್ಟಾರೆಯಾಗಿ ಗ್ರಂಥಸಂಪಾದನೆ ಕುರಿತು ಕರ್ನಾಟಕದಲ್ಲಿ ಅಷ್ಟೇ ಅಲ್ಲದೇ ಹೊರಗಡೆಯೂ ಸಂಪಾದನಾ ಕಾರ್ಯ ದಿನದಿಂದ ದಿನಕ್ಕೆ ಶುದ್ಧವಾಗಿ ಬೆಳೆಯುತ್ತಿದೆ. ಗ್ರಂಥಗಳನ್ನು ವಿವಿಧ ಆಯಾಮದಿಂದ ನೋಡುವ ಶುದ್ಧವಾಗಿ ಪರಿಷ್ಕರಿಸುವ ಕಾರ್ಯವೂ ನಡೆಯುತ್ತಿದೆ. ವಿಶ್ವವಿದ್ಯಾಲಯಗಳು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಪ್ರತ್ಯೇಕ ವಿಭಾಗವಾಗಿ ಅಧ್ಯಯನ ಕೈಗೊಂಡು ಯುವ ಸಮುದಾಯವನ್ನು ಈ ಶಾಸ್ತ್ರದ ಕುರಿತು ಅಧ್ಯಯನ ಕೈಗೊಳ್ಳುತ್ತಿರುವುದು ಆಶಾದಾಯಕ ವಿಚಾರ ಎಂದು ಹೇಳಬಹುದು.

**ಅಡಿಟಿಪ್ಪಣಿ:**


1. ಕರ್ನಾಟಕ ಗ್ರಂಥಸಂಪಾದನೆ – ಡಾ.ಎಸ್.ಎಸ್.ಅಂಗಡಿ, ಪು– ಗಿಖಖ
2. ಕನ್ನಡ ಗ್ರಂಥಸಂಪಾದನ ಶಾಸ್ತ್ರ – ಎಂ.ಎಂ. ಕಲಬುರ್ಗಿ, ಪು– 3
3. ಗ್ರಂಥ ಸಂಪಾದನ ಶಾಸ್ತ್ರ ಪರಿಚಯ – ಸೀತಾರಾಮ ಜಾಗೀರ್‌ದಾರ್, ಪು–1
4. ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ – ಬಿ.ಎಸ್. ಸಣ್ಣಯ್ಯ, ಪು–2
5. ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ (ಲೇಖನ) ಡಾ. ಎಫ್.ಟಿ. ಹಳ್ಳಿಕೇರಿ, ಸಾಹಿತ್ಯ ಪಥ (ಸಂ) – ಕರೀಗೌಡ ಬೀಚನಹಳ್ಳಿ, ಪು –450
6. ಕರ್ನಾಟಕ ಗ್ರಂಥಸಂಪಾದನೆ – ಡಾ.ಎಸ್.ಎಸ್.ಅಂಗಡಿ, ಪು– ಫಿಖಖ
7. ನರಸಿಂಹಚಾರ್ ಡಿ.ಎಲ್., 1964, ಕನ್ನಡ ಗ್ರಂಥಸಂಪಾದನೆ, ಡಿ.ವಿ.ಕೆ. ಮೂರ್ತಿ, ಮೈಸೂರು.

8. ಕಲಬುರ್ಗಿ ಎಂ.ಎಂ., 1972, ಕನ್ನಡ ಗ್ರಂಥಸಂಪಾದನ ಶಾಸ್ತ್ರ, ಸ್ವಪ್ನಾ ಪ್ರಕಾಶನ, ಬೆಂಗಳೂರು.
9. ಜಾಗೀರ್‌ದಾರ್ ಸೀತಾರಾಮ, 1978, ಗ್ರಂಥ ಸಂಪಾದನ ಶಾಸ್ತ್ರ ಪರಿಚಯ, ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.
10. ಸಣ್ಣಯ್ಯ ಬಿ.ಎಸ್., 2002, ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
11. ಅಂಗಡಿ ಎಸ್. ಎಸ್., 2012, ಕರ್ನಾಟಕ ಗ್ರಂಥಸಂಪಾದನೆ, ತನುಮನ ಪ್ರಕಾಶನ, ಮೈಸೂರು.
12. ಹಳ್ಳಿಕೇರಿ ಎಫ್.ಟಿ., ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ (ಲೇ), ಬೀಚ್ಚನಹಳ್ಳಿ ಕರಿಗೌಡ, 2007, ಸಾಹಿತ್ಯ ಸಂಸ್ಕೃತಿ ಪಥ(ಪು), ಕನ್ನಡ ವಿ.ವಿ ಮತ್ತು ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.